**Registered post with Acknowledgement Due**

Ref.:SR-II:RTI:F-1723/23-24/3564. Date:01.05.2024

To

Shri Khuram Sharif
S/o.Late Allimulla Sharif
Mutton Market Road
Devanga Beedi
Nelamangala Town
Nelamangala Taluk
Bengaluru Rural District-562123

Sir,

Sub: Information sought under RTI Act, 2005 – reg.
Ref.- Your RTI Application dated.22.03.2024

This has reference to your RTI application received in this office dated.23.03.2024 received in this office on 10.04.2024. The information sought in your application under RTI Act 2005, is as given below.

Reply

1. Attached as Annexure-I
2. No Permission has been granted to the fractory owners.

Thanking you,

Yours faithfully,

( G Dhananjaya )
Sr.General Manager & CPIO
e-mail id: sr2cpio@powergrid.co.in

KRN – Bg. GPO – 25

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - III-2

ಬೆಂಗಳೂರು, ಸೋಮವಾರ, ನವೆಂಬರ್ ೮, ೧೯೯೯ (ಕಾರ್ತೀಕ ೧೭, ಶಕ ವರ್ಷ ೧೯೨೧) | ನಂ. ೧೩೪೨

## POWERGRID CORPORATION OF INDIA LTD.

**(A GOVERNMENT OF INDIA ENTERPRISE)**

**B-9, QUTAB INSTITUTIONAL AREA, KATWARIA SARAI, NEW DELHI-110 016**

***Transmission System Associated with Ramagundam Stage-III***

***Notification of the Scheme under Section 29(2) of Electricity (Supply) Act, 1948, as Amended***

Whereas, in exercise of its power under section 28 of the Electricity (Supply) Act, 1948 as amended, the Scheme relating to the establishment, construction operation and maintenance of Transmission System Associated with Ramagundam Stage-III in Southern Region has been prepared by Power Grid Corporation of India Ltd., New Delhi having its registered office at B-9, Qutab Institutional Area, Katwaria Sarai, New Delhi-110016, a Generating Company set up by the Government of India under the aforesaid Act (hereinafter referred to as POWERGRID), with a view to develop an integrated and efficient Power transmission system network in the country.

And whereas, under section 29(2) of Electricity (Supply) Act 1948, POWERGRID before finalisation of the scheme and submission thereof to the Central Electricity Authority for concurrence, is required to cause such schemes to be published in the Official Gazettes of the States concerned and in such local newspapers as POWERGRID may consider necessary so that any licensee or other person interested may make representations, if necessary, on the scheme.

Now, therefore, POWERGRID hereby publishes the scheme in terms of Section 29(2) of the aforesaid Act as follows :

**Name of the Scheme** : The scheme shall be called "Transmission System Associated with Ramagundam Stage-III."

**Sallent Features :**

The salient features of the project shall be given below :

**A. Transmission Line :**

(I) 400 KV D/C Ramagundam-Hyderabad Transmission Line-Length 200 Kms (aprox).

(II) 400 KV S/C Hyderabad-Kurnool-Gooty Transmission Line-length 300 Kms (approx).

(III) 400 KV S/C Gooty-Nelamangala Transmission Line-length 250 Kms (approx).

(IV) **400 KV S/C Khammam-Nagarjunasagar Transmission Line**-length 150 Kms (approx.)

**B. Substation**

(I) **Extension of Hyderabad 400/220 kV substation (POWERGRID)**

The substation shall include 2 nos. line bays for 400 kV D/C line to Ramagundam and 1 no. line bay for 400 kV S/C line to Kurnool.

(II) **Extension of Kurnool 400/220 kV substation (APSEB)**

The substation shall include 1 no. line bay for 400 kV S/C line to Hyderabad and 1 no. line bay for 400 kV S/C line to Gooty.

(III) **Extension of Gooty 400/220 kV substation (POWERGRID)**

The substation shall include 1 no. line bay for 400 kV S/C line to Kurnool and 1 no. line bay for 400 kV S/C line to Nelamangala.

(IV) **Extension of Nelamangala 400/220 kV substation (KEB)**

The substation shall include 1 no. line bay for 400 kV S/C line to Gooty.

(V) **Extension of Khamman 400/220 kV substation (POWERGRID)**

The substation shall include 1 no. line bay for 400 kV S/C line to Nagarjunsagar.

(VI) **Extension of Nagarjunasagar 400/220 kV substation (POWERGRID)**

The substation shall include 1 no. line bay for 400 kV S/C line to Khamman.

**C. Shunt Capacitors**

Shunt Capacitors of capacity 375 MVAR shall be installed in different substations of SEBs, the location of which shall be finalised with SEB s.

**Location :**

The Modified transmission line and substation are located in the state of Andhra Pradesh and Karnataka and shall pass through the following significant Districts as per the details given below :

| Name of line/Substation | State | District |
|---|---|---|
| 1.0 400 KV D/C Ramagundam - Hyderabad Trans. Line. | Andhra Pradesh | Karimnagar, Warangal, Ranga Reddy |
| 2.0 400 KV S/C Hyderabad-Kurnool-Gooty Trans. Line | Andhra Pradesh | Ranga Reddy, Mahboobnagar, Kurnool, Ananthpur |
| 3.0 400 KV S/C Gooty-Nelamangala Trans. Line | Andhra Pradesh<br>Karnataka | Ananthapur<br>Kolar, Bangalore |

| | | | |
|---|---|---|---|
| 4.0 | 400 KV S/C Khammam - Nagarjunasagar Trans. Line | Andhra Pradesh | Khammam, Nalgonda, Guntur |
| 5.0 | Extension of Hyderabad 400/220 KV Substation | Andhra Pradesh | Ranga Reddy |
| 6.0 | Extension of Kurnool 400/220 KV Substation | Andhra Pradesh | Kurnool |
| 7.0 | Extension of Gooty 400/220 KV Substation | Andhra Pradesh | Ananthapur |
| 8.0 | Extension of Nelamangala 400/220 KV Substation | Karnataka | Bangalore |
| 9.0 | Extension of Khammam 400/220 KV Substation | Andhra Pradesh | Khammam |
| 10.0 | Extension of Nagarjunasagar 400/220 KV Substation | Andhra Pradesh | Guntur |

**Commissioning :**

The project is scheduled to be commissioned within 48 months from the date of approval/ funding tie-up, whichever is later.

**Estimated Cost :**

The Estimated cost of the project is Rs. 343.63 crores (including IDC of Rs. 31.05 Crores and financing charges of Rs. 5.30 crores) at IInd Quarter 1999 price level.

**Justification and Benefits :**

(I) National Thermal Power Corporation Limited (NTPC) is augmenting the existing Ramagundam Super Thermal Power Project (2100 MW) by another 1x500 MW unit under Stage-III. The project has been envisaged to evacuate the power from generating station to the beneficiaries in a reliable manner.

(II) The shunt capacitors provided in the project shall reduce the T & D losses and will increase the transfer capacity of transmission lines of the system.

In pursuance of the provision of Electricity (Supply) Act, 1948, the Power Grid Corporation of India Ltd., shall exercise all powers vested in a generating company under the said Act for the purpose of implementation of the aforesaid scheme. It is also hereby notified that in terms of Section 42 of the Electricity (Supply) Act, 1948 as amended, the Power Grid Corporation of India Ltd., is undertaking and executing the sanctioned scheme and shall have all the power for placing of any wires, Poles, Wall Brackets, Stays Apparatus and Appliances for the transmission and distribution of Electricity or for transmission of Telegraphic or Telephonic communications necessary for proper co-ordination of the works of the generating company for the areas indicated above, which the telegraphs authority possesses under part II of the Indian Telegraphs Act, 1885 in respect of Telegraphs established and maintained notwithstanding the provisions of Section 12 to 16, 18 and 19 of the Indian Electricity Act, 1910.

In terms of the provisions contained in Section 29(2) of the Electricity (Supply) Act, 1948 as amended, the sanction of the aforesaid scheme by the Corporation is hereby notified to the general public by the publication in the Official Gazette and leading local daily.

Notice is hereby given under section 29(2) of the said Act that any licensee or other persons interested may make representation in respect of the above scheme within two months from the date of publication of this notification after which no representation will be considered.

By, the order and on behalf of
Powergrid Corporation of India Ltd.
**Divya Tandon**
Company Secretary

**ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್**

(ಭಾರತ ಸರ್ಕಾರದ ಒಂದು ಉದ್ಯಮ)

ಬಿ - 9, ಕುತಬ್ ಇನ್‌ಸ್ಟಿಟ್ಯೂಷನಲ್ ಏರಿಯಾ, ಕಾಟವರಿಯ ಸರಾಯ್, ನವದೆಹಲಿ - 110 016

ರಾಮಗುಂಡಮ್ III ನೇ ಹಂತಕ್ಕೆ ಸಂಬಂಧಿಸಿದ ವಿದ್ಯುತ್ ರವಾನೆ ವ್ಯವಸ್ಥೆ ತಿದ್ದುಪಡಿಯಾದಂತಹ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 29(2)ನೇ

ಪ್ರಕರಣದ ಮೇರೆಗೆ ಯೋಜನೆಯ ಅಧಿಸೂಚನೆ.

ತಿದ್ದುಪಡಿಯಾದಂತಹ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 28ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ಚಲಾಯಿಸಿ ದಕ್ಷಿಣ ಪ್ರದೇಶದಲ್ಲಿಯ ರಾಮಗುಂಡಮ್ III ನೇ ಹಂತಕ್ಕೆ ಸಂಬಂಧಿಸಿದ ವಿದ್ಯುತ್ ರವಾನೆಯ ಸ್ಥಾಪನೆ, ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಪಟ್ಟ ಯೋಜನೆಯನ್ನು, ಬಿ-9, ಕುತಬ್ ಇನ್‌ಸ್ಟಿಟ್ಯೂಷನಲ್ ಏರಿಯಾ, ಕಾಟವರಿಯಾ ಸರಾಯ್, ನವದೆಹಲಿ-110 016 ಇಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವಂಥ ಮೇಲೆ ತಿಳಿಸಿದ ಅಧಿನಿಯಮದ ಮೇರೆಗೆ ಭಾರತ ಸರ್ಕಾರದಿಂದ ಸ್ಥಾಪಿತವಾಗಿರುವ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್, ನವದೆಹಲಿ ಈ ಸಂಸ್ಥೆಯು (ಇಲ್ಲಿ ಇನ್ನು ಮುಂದೆ ಪವರ್‌ಗ್ರಿಡ್ ಎಂಬುದಾಗಿ ಉಲ್ಲೇಖಿತವಾದ) ರಾಷ್ಟ್ರದಲ್ಲಿ ಒಂದು ಸಮಗ್ರ ಹಾಗೂ ದಕ್ಷ ರೀತಿಯಲ್ಲಿ ವಿದ್ಯುತ್ ರವಾನೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಸಿದ್ಧಪಡಿಸಿದೆ.

ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 29(2)ನೇ ಪ್ರಕರಣದ ಮೇರೆಗೆ ಪವರ್‌ಗ್ರಿಡ್‌ನಂಥ ಯೋಜನೆಯನ್ನು ಅಂತಿಮಗೊಳಿಸುವ ಮತ್ತು ಸಹಮತಿಗಾಗಿ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರಕ್ಕೆ ಅದನ್ನು ಸಲ್ಲಿಸುವ ಮುಂಚೆ, ಸಂಬಂಧಪಟ್ಟ ರಾಜ್ಯಗಳ ಸರ್ಕಾರಿ ರಾಜ್ಯಪತ್ರಗಳಲ್ಲಿ ಮತ್ತು ಪವರ್‌ಗ್ರಿಡ್ ಅವಶ್ಯವೆಂದು ಭಾವಿಸುವಂಥ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗುತ್ತದೆ. ಇದರಿಂದಾಗಿ ಹಿತಾಸಕ್ತಿಯುಳ್ಳ ಯಾರೇ ಲೈಸೆನ್ಸುದಾರ ಅಥವಾ ಇತರ ವ್ಯಕ್ತಿಯು ಅಗತ್ಯವಿರುವಲ್ಲಿ ಯೋಜನೆಗೆ ಸಂಬಂಧಿಸಿ ಮನವಿಗಳನ್ನು ಸಲ್ಲಿಸಬಹುದಾಗಿದೆ.

ಆದ್ದರಿಂದ ಈಗ ಮೇಲೆ ತಿಳಿಸಿದ ಅಧಿನಿಯಮದ 29(2)ನೇ ಪ್ರಕರಣದ ಮೇರೆಗೆ ಪವರ್‌ಗ್ರಿಡ್ ಯೋಜನೆಯನ್ನು ಈ ಮೂಲಕ ಪ್ರಕಟಿಸಿದೆ.

ಯೋಜನೆಯ ಹೆಸರು :- ಯೋಜನೆಯನ್ನು "ರಾಮಗುಂಡಮ್ III ನೇ ಹಂತಕ್ಕೆ ಸಂಬಂಧಿಸಿದ ವಿದ್ಯುತ್ ರವಾನೆ ವ್ಯವಸ್ಥೆ" ಎಂಬುದಾಗಿ ಕರೆಯತಕ್ಕದ್ದು.

ಮುಖ್ಯ ಲಕ್ಷಣಗಳು :

ಪ್ರೊಜೆಕ್ಟಿನ ಮುಖ್ಯ ಲಕ್ಷಣಗಳು ಈ ಮುಂದಿನಂತಿವೆ :

ಎ. ವಿದ್ಯುತ್ ರವಾನೆ ಮಾರ್ಗ:

(i) 400 ಕೆವಿಡಿ/ಸಿ ರಾಮಗುಂಡಮ್ - ಹೈದರಾಬಾದ್ ವಿದ್ಯುತ್ ರವಾನೆ ಮಾರ್ಗ - ಉದ್ದ 200 ಕಿ.ಮೀ. (ಅಂದಾಜು).

(ii) 400 ಕೆವಿಎಸ್/ಸಿ ಹೈದರಾಬಾದ್ - ಕರ್ನೂಲ್ - ಗುತ್ತಿ ವಿದ್ಯುತ್ ರವಾನೆ ಮಾರ್ಗ - ಉದ್ದ 300 ಕಿ.ಮೀ. (ಅಂದಾಜು).

(iii) 400 ಕೆವಿಎಸ್/ಸಿ ಗುತ್ತಿ - ನೆಲಮಂಗಲ ವಿದ್ಯುತ್ ರವಾನೆ ಮಾರ್ಗ - 250 ಕಿ.ಮೀ. (ಅಂದಾಜು).

(iv) 400 ಕೆವಿ ಎಸ್/ಸಿ ಖಮ್ಮಂ - ನಾಗಾರ್ಜುನ ಸಾಗರ ವಿದ್ಯುತ್ ರವಾನೆ ಮಾರ್ಗ - ಉದ್ದ 150 ಕಿ.ಮೀ. (ಅಂದಾಜು).

ಬಿ. ಉಪಕೇಂದ್ರ :

(i) ಹೈದರಾಬಾದ್ 400 : 220 ಕೆವಿ ಉಪಕೇಂದ್ರದ ವಿಸ್ತರಣೆ (ಪವರ್‌ಗ್ರಿಡ್)

ಉಪಕೇಂದ್ರವು ರಾಮಗುಂಡಮ್‌ಗೆ 400 ಕೆವಿ ಡಿ/ಸಿ ಲೈನ್‌ಗೆ 2 ನಂ. ಗಳ ಲೈನ್ ವೇಯನ್ನು ಮತ್ತು ಕರ್ನೂಲ್‌ಗೆ 400 ಕೆವಿ ಎಸ್/ ಸಿ ಲೈನ್‌ಗೆ 1 ನಂ. ಲೈನ್ ವೇ ಯನ್ನು ಒಳಗೊಂಡಿತಕ್ಕದ್ದು.

(ii) ಕರ್ನೂಲ್ 400/220 ಕೆವಿ ಉಪಕೇಂದ್ರದ ವಿಸ್ತರಣೆ (ಎಪಿಎಸ್‌ಇಬಿ)

ಉಪಕೇಂದ್ರವು ಹೈದರಾಬಾದಿಗೆ 400 ಕೆವಿ ಎಸ್/ ಸಿ ಲೈನ್‌ಗೆ 1 ನಂ. ಲೈನ್ ಬೇ ಯನ್ನು ಮತ್ತು ಗುತ್ತಿಗೆ 400 ಕೆವಿ ಎಸ್/ಸಿ ಲೈನ್‌ಗೆ 1 ನಂ. ಲೈನ್ ಬೇ ಯನ್ನು ಒಳಗೊಂಡಿರತಕ್ಕದ್ದು.

(iii) ಗುತ್ತಿ 400/200 ಕೆವಿ ಉಪಕೇಂದ್ರದ ವಿಸ್ತರಣೆ (ಪವರ್‌ಗ್ರಿಡ್)

ಉಪಕೇಂದ್ರವು ಕರ್ನೂಲ್‌ಗೆ 400 ಕೆವಿ ಎಸ್/ಸಿ ಲೈನ್‌ಗೆ 1 ನಂ. ಲೈನ್ ಬೇ ಯನ್ನು ಮತ್ತು ನೆಲಮಂಗಲಕ್ಕೆ 400 ಕೆವಿ ಎಸ್/ಸಿ ಲೈನ್‌ಗೆ 1 ನಂ. ಲೈನ್ ಬೇಯನ್ನು ಒಳಗೊಂಡಿರತಕ್ಕದ್ದು.

(iv) ನೆಲಮಂಗಲ 400/220 ಕೆವಿ ಉಪಕೇಂದ್ರದ ವಿಸ್ತರಣೆ (ಕೆಇಬಿ)

ಉಪಕೇಂದ್ರವು ಗುತ್ತಿಗೆ 400 ಕೆವಿ ಎಸ್/ಸಿ ಲೈನ್‌ಗೆ 1 ನಂ. ಲೈನ್ ಬೇ ಯನ್ನು ಒಳಗೊಂಡಿರತಕ್ಕದ್ದು.

(v) ಖಮ್ಮಂ 400/220 ಕೆವಿ ಉಪಕೇಂದ್ರದ ವಿಸ್ತರಣೆ (ಪವರ್‌ಗ್ರಿಡ್)

ಉಪಕೇಂದ್ರವು ನಾಗಾರ್ಜುನ ಸಾಗರಕ್ಕೆ 400 ಕೆವಿಎಸ್/ಸಿ ಲೈನ್‌ಗಾಗಿ 1 ನಂ. ಲೈನ್ ಬೇ ಯನ್ನು ಒಳಗೊಂಡಿರತಕ್ಕದ್ದು.

(vi) ನಾಗಾರ್ಜುನ ಸಾಗರ 400/220 ಕೆವಿ ಉಪಕೇಂದ್ರದ ವಿಸ್ತರಣೆ (ಪವರ್‌ಗ್ರಿಡ್)

ಉಪಕೇಂದ್ರವು ಖಮ್ಮಂ ಗೆ 400 ಕೆವಿ ಎಸ್/ಸಿ ಲೈನ್‌ಗಾಗಿ 1 ನಂ. ಲೈನ್ ಬೇ ಯನ್ನು ಒಳಗೊಂಡಿರತಕ್ಕದ್ದು.

ಸಿ. ಷಂಟ್ ಕೆಪಾಸಿಟರ್‌ಗಳು :

375 ಎಂವಿಎಆರ್ ಸಾಮರ್ಥ್ಯದ ಷಂಟ್ ಕೆಪಾಸಿಟರ್‌ಗಳನ್ನು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗಳ ವಿವಿಧ ಉಪಕೇಂದ್ರಗಳಲ್ಲಿ ಸ್ಥಾಪಿಸತಕ್ಕದ್ದು. ಇವುಗಳ ಸ್ಥಳವನ್ನು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗಳೊಂದಿಗೆ ಅಂತಿಮಗೊಳಿಸಿ ನಿರ್ಣಯಿಸತಕ್ಕದ್ದು.

ಸ್ಥಳ ನಿರ್ದೇಶನ :

ಮಾರ್ಪಾಡುಗೊಳಿಸಿದ ವಿದ್ಯುತ್ ರವಾನೆ ಮಾರ್ಗ ಮತ್ತು ಉಪಕೇಂದ್ರದ ಸ್ಥಳ ನಿರ್ದೇಶನವನ್ನು ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಮಾಡಲಾಗಿದೆ ಮತ್ತು ಅದು ಈ ಕೆಳಗೆ ನೀಡಿರುವ ವಿವರಗಳ ಪ್ರಕಾರ ಮುಂದೆ ತಿಳಿಸಿರುವ ಪ್ರಮುಖ ಜಿಲ್ಲೆಗಳ ಮೂಲಕ ಹಾದು ಹೋಗತಕ್ಕದ್ದು.

| | ಮಾರ್ಗ : ಉಪಕೇಂದ್ರದ ಹೆಸರು | ರಾಜ್ಯ | ಜಿಲ್ಲೆ |
|---|---|---|---|
| 1.0 | 400 ಕೆವಿ ಡಿ/ಸಿ ರಾಮಗುಂಡಮ್ - ಹೈದರಾಬಾದ್ ವಿದ್ಯುತ್ ರವಾನೆ ಮಾರ್ಗ | ಆಂಧ್ರ ಪ್ರದೇಶ | ಕರೀಮ್ ನಗರ, ವಾರಂಗಲ್, ರಂಗಾರೆಡ್ಡಿ |
| 2.0 | 400 ಕೆವಿ ಎಸ್/ಸಿ ಹೈದರಾಬಾದ್ - ಕರ್ನೂಲ್ - ಗುತ್ತಿ ವಿದ್ಯುತ್ ರವಾನೆ ಮಾರ್ಗ | ಆಂಧ್ರ ಪ್ರದೇಶ | ರಂಗಾರೆಡ್ಡಿ, ಮೆಹಬೂಬ್ ನಗರ, ಕರ್ನೂಲ್ - ಅನಂತಪುರ |
| 3.0 | 400 ಕೆವಿ ಎಸ್/ಸಿ ಗುತ್ತಿ - ನೆಲಮಂಗಲ ವಿದ್ಯುತ್ ರವಾನೆ ಮಾರ್ಗ | ಆಂಧ್ರ ಪ್ರದೇಶ<br>ಕರ್ನಾಟಕ | ಅನಂತಪುರ,<br>ಕೋಲಾರ, ಬೆಂಗಳೂರು |
| 4.0 | 400 ಕೆವಿ ಎಸ್/ಸಿ ಖಮ್ಮಂ - ನಾಗಾರ್ಜುನ ಸಾಗರ ವಿದ್ಯುತ್ ರವಾನೆ ಮಾರ್ಗ | ಆಂಧ್ರ ಪ್ರದೇಶ | ಖಮ್ಮಂ, ನೆಲಗೊಂಡ, ಗುಂಟೂರು |
| 5.0 | ಹೈದರಾಬಾದ್ 400/200 ಕೆವಿ ಉಪಕೇಂದ್ರದ ವಿಸ್ತರಣೆ | ಆಂಧ್ರ ಪ್ರದೇಶ | ರಂಗಾರೆಡ್ಡಿ |
| 6.0 | ಕರ್ನೂಲ್ 400/200 ಕೆವಿ ಉಪಕೇಂದ್ರದ ವಿಸ್ತರಣೆ | ಆಂಧ್ರ ಪ್ರದೇಶ | ಕರ್ನೂಲು |
| 7.0 | ಗುತ್ತಿ 400/220 ಕೆವಿ ಉಪಕೇಂದ್ರದ ವಿಸ್ತರಣೆ | ಆಂಧ್ರ ಪ್ರದೇಶ | ಅನಂತಪುರ |
| 8.0 | ನೆಲಮಂಗಲ 400/200 ಕೆವಿ ಉಪಕೇಂದ್ರದ ವಿಸ್ತರಣೆ | ಕರ್ನಾಟಕ | ಬೆಂಗಳೂರು |
| 9.0 | ಖಮ್ಮಂ 400/220 ಕೆವಿ ಉಪಕೇಂದ್ರದ ವಿಸ್ತರಣೆ | ಆಂಧ್ರ ಪ್ರದೇಶ | ಖಮ್ಮಂ |
| 10.0 | ನಾಗಾರ್ಜುನ ಸಾಗರ 400/220 ಕೆವಿ ಉಪಕೇಂದ್ರದ ವಿಸ್ತರಣೆ | ಆಂಧ್ರ ಪ್ರದೇಶ | ಗುಂಟೂರು |

ಕಾರ್ಯಾರಂಭ :

ಪ್ರೊಜೆಕ್ಟು ಅನುಮೋದನೆಯಾದ / ನಿಧಿಯ ವ್ಯವಸ್ಥೆಯಾದ ದಿನಾಂಕದಿಂದ ಇದರಲ್ಲಿ ಯಾವುದು ನಂತರವೋ ಅಂದಿನಿಂದ 48 ತಿಂಗಳ ಒಳಗಾಗಿ ಕಾರ್ಯಾರಂಭ ಮಾಡಬೇಕು.

ಅಂದಾಜು ವೆಚ್ಚ :

ಪ್ರೊಜೆಕ್ಟಿನ ಅಂದಾಜು ವೆಚ್ಚವು 1999ರ II ನೇ ತ್ರೈಮಾಸಿಕ ಬೆಲೆ ಮಟ್ಟದಂತೆ (31.05 ಕೋಟಿ ರೂ. ಐಡಿಸಿ ಮತ್ತು 5.30 ಕೋಟಿ ರೂ. ಹಣಕಾಸು ವೆಚ್ಚಗಳು ಸೇರಿದಂತೆ) 343.63 ಕೋಟಿ ರೂ. ಆಗಿದೆ.

ಸಮರ್ಥನೆ ಮತ್ತು ಪ್ರಯೋಜನಗಳು :

(i) ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಎನ್‌ಟಿಪಿಸಿ) ಇದು ಈಗಿರುವ ರಾಮಗುಂಡಂ ಸೂಪರ್ ಥರ್ಮಲ್ ಪವರ್ ಪ್ರೊಜೆಕ್ಟನ್ನು (2100 ಮೆ.ವ್ಯಾ.) III ನೇ ಹಂತದ ಮೇರೆಗೆ 1 x 500 ಮೆ.ವ್ಯಾ. ಯುನಿಟ್ ದಿಂದ ವೃದ್ಧಿಪಡಿಸುತ್ತದೆ. ವಿದ್ಯುತ್ ಉತ್ಪಾದನಾ ಕೇಂದ್ರದಿಂದ ವಿದ್ಯುತನ್ನು ಪ್ರಯೋಜನದಾರರಿಗೆ ವಿಶ್ವಾಸಾರ್ಹ ರೀತಿಯಲ್ಲಿ ಕಳುಹಿಸುವಂತೆ ಪ್ರೊಜೆಕ್ಟನ್ನು ರೂಪಿಸಲಾಗಿದೆ.

(ii) ಪ್ರೊಜೆಕ್ಟಿನಲ್ಲಿ ಒದಗಿಸಿರುವ ಷಂಟ್ ಕೆಪಾಸಿಟರುಗಳು ಟಿ ಮತ್ತು ಡಿ ನಷ್ಟಗಳನ್ನು ಕಡಿಮೆ ಮಾಡುತ್ತವೆ ಮತ್ತು ವ್ಯವಸ್ಥೆಯ ವಿದ್ಯುತ್ ರವಾನೆ ಮಾರ್ಗಗಳ ರವಾನೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳಿಗೆ ಅನುಗುಣವಾಗಿ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಮೇಲೆ ತಿಳಿಸಿದ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸದರಿ ಅಧಿನಿಯಮದ ಮೇರೆಗೆ ಒಂದು ವಿದ್ಯುತ್ ಉತ್ಪಾದನಾ ಕಂಪನಿಯಲ್ಲಿ ನಿಹಿತಗೊಂಡ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು. ತಿದ್ದುಪಡಿಯಾದಂಥ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948ರ 42ನೇ ಪ್ರಕರಣದ ಮೇರೆಗೆ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಮಂಜೂರಾದ ಯೋಜನೆಯನ್ನು ಕೈಗೊಳ್ಳುತ್ತದೆ ಹಾಗೂ ನಿರ್ವಹಿಸುತ್ತದೆ ಮತ್ತು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ 12 ರಿಂದ 16 ಮತ್ತು 19ನೇ ಉಪಬಂಧಗಳು ಇದ್ದರೂ ಸ್ಥಾಪಿಸಲಾದ ಹಾಗೂ ನಿರ್ವಹಿಸಲಾದ ಟೆಲಿಗ್ರಾಫ್‌ಗಳ ವಿಷಯದಲ್ಲಿ ಭಾರತೀಯ ಟೆಲಿಗ್ರಾಫಿಕ್ ಅಧಿನಿಯಮ, 1885ರ ಭಾಗ - III ರ ಮೇರೆಗೆ ಟೆಲಿಗ್ರಾಫಿಕ್ ಪ್ರಾಧಿಕಾರ ಹೊಂದಿರುವಂಥ ಮೇಲೆ ತಿಳಿಸಿದ ಪ್ರದೇಶಗಳಿಗಾಗಿ ವಿದ್ಯುತ್ ಉತ್ಪಾದನಾ ಕಂಪನಿಯ ಕಾಮಗಾರಿಗಳ ಸಮರ್ಪಕ ನಿರ್ವಹಣೆಗೆ ಅಗತ್ಯವಿರುವಂಥ ವಿದ್ಯುಚ್ಛಕ್ತಿಯ ರವಾನೆ ಹಾಗೂ ವಿತರಣೆಗೆ ಅಥವಾ ಟೆಲಿಗ್ರಾಫಿಕ್ ಅಥವಾ ಟೆಲಿಫೋನಿನ ಸಂಪರ್ಕಗಳ ರವಾನೆಗೆ ಯಾವುವೇ ವೈರ್‌ಗಳನ್ನು, ಕಂಬಗಳನ್ನು, ವಾಲ್ ಬ್ರಾಕೆಟ್‌ಗಳನ್ನು ಸ್ಟೇ ಸಾಧನ ಮತ್ತು ಸಲಕರಣೆಗಳನ್ನು ನೆಲೆಗೊಳಿಸಲು ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದು ಈ ಮೂಲಕ ಪ್ರಕಟಿಸಲಾಗಿದೆ.

ತಿದ್ದುಪಡಿಯಾದಂಥ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 29(2)ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿ ಕಾರ್ಪೊರೇಷನ್‌ನಿಂದ ಮೇಲೆ ತಿಳಿಸಿದ ಯೋಜನೆಯ ಮಂಜೂರಾತಿಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಪ್ರಮುಖ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಈ ಮೂಲಕ ಪ್ರಕಟಿಸಲಾಗಿದೆ.

ಇದರಲ್ಲಿ ಹಿತಾಸಕ್ತಿಯನ್ನು ಯಾರೇ ಲೈಸೆನ್ಸುದಾರರ ಅಥವಾ ಇತರ ವ್ಯಕ್ತಿಗಳು ಮೇಲೆ ತಿಳಿಸಿದ ಯೋಜನೆಯ ಸಂಬಂಧವಾಗಿ ಈ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ಮನವಿಗಳನ್ನು ಸಲ್ಲಿಸಬಹುದೆಂದು ಮತ್ತು ಆ ಅವಧಿಯ ನಂತರ ಯಾವುವೇ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಸದರಿ ಅಧಿನಿಯಮದ 29(2)ನೇ ಪ್ರಕರಣದ ಮೇರೆಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್
ಆದೇಶಾನುಸಾರ ಮತ್ತು ಪರವಾಗಿ

ದಿವ್ಯ ಟಂಡನ್,
ಕಂಪನಿ ಕಾರ್ಯದರ್ಶಿ.